


# ಜಲಚರಿ ಬಸ್!




ಸಾಮಾನ್ಯವಾಗಿ ಬಸ್ ರಸ್ತೆಯಲ್ಲಿ ಹಾಗೂ ಹಡಗು ನೀರಿನಲ್ಲಿ ಚಲಿಸುವುದನ್ನು ನಾವೆಲ್ಲರೂ ನೋಡಿರುತ್ತೇವೆ. ಒಂದು ವೇಳೆ ಬಸ್ ರಸ್ತೆಯಲ್ಲೂ ಹಾಗೂ ನೀರಿನಲ್ಲಿ ಚಲಿಸುತ್ತದೆಂದು ಯಾರಾದರೂ ಹೇಳಿದರೆ ನಂಬಲು ಅಸಾಧ್ಯವಲ್ಲವೇ? ಆದರೆ ನೆದರ್‌ಲೆಂಡ್‌ನ 'ರೋಟರ್ ಡ್ಯಾಂ' ಪ್ರವಾಸ ಕೈಗೊಂಡಾಗ ಇದು ಸಾಧ್ಯವೆಂದು ನನಗೆ ಗೊತ್ತಾಯಿತು. ಉಭಯಚರಿ ಬಸ್ಸಿನಲ್ಲೇ ಕುಳಿತುಕೊಂಡು ರಸ್ತೆಯಲ್ಲಿ ಹಾಗೂ ನೀರಿನಲ್ಲಿ ಚಲಿಸುತ್ತಾ ರೋಚಕ ಅನುಭವವನ್ನು ಪಡೆಯಲು 'ಸ್ಪ್ಲಾಶ್ ಟೂರ್ಸ್'ನಲ್ಲಿ, 'ರೋಟರ್ ಡ್ಯಾಂ' ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವ ಸುಮಾರು ಒಂದು ಗಂಟೆ ಪ್ರವಾಸವನ್ನು ಕೈಗೊಳ್ಳಲೇಬೇಕು.

ಮ್ಯೂಸಿ ನದಿಯ ದಡದಲ್ಲಿರುವ 'ರೋಟರ್ ಡ್ಯಾಂ' ನಗರ ನೆದರ್‌ಲೆಂಡ್‌ನ ಎರಡನೇ ಅತಿದೊಡ್ಡ ನಗರ. 1940ರಲ್ಲಿ ಜರ್ಮನಿ ನಡೆಸಿದ ವಾಯು ದಾಳಿಯಿಂದ ಬಹುತೇಕ ನಾಶಗೊಂಡಿತು. ಯುದ್ಧದ ನಂತರ 'ಸೆಂಟ್ರಲ್ ರೋಟರ್ ಡ್ಯಾಂ' ಅನ್ನು ಮರು ನಿರ್ಮಿಸಲಾಯಿತು. ಆಧುನಿಕ ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಬೀದಿಗಳು, ವಸತಿ ಕೇಂದ್ರಗಳು ಮೊದಲಾದ ಯೂರೋಪಿನ ಅತ್ಯಂತ ಆಧುನಿಕ ವಾಸ್ತುಶೈಲಿಯ ನಿರ್ಮಾಣಗಳನ್ನು ಹೊಂದಿರುವ ನಗರವೆಂಬ ಹೆಗ್ಗಳಿಕೆಗೆ 'ರೋಟರ್ ಡ್ಯಾಂ' ಪಾತ್ರವಾಗಿದೆ.

'ರೋಟರ್ ಡ್ಯಾಂ' ನಗರವನ್ನು ವೀಕ್ಷಿಸಲು 'ಹಾಪ್ ಆನ್ ಹಾಪ್ ಆಫ್' ಬಸ್ ಸೌಲಭ್ಯವಿದೆ. ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಬಳಿ ನಿಲುಗಡೆಯನ್ನು ಹೊಂದಿರುವ ಹಲವು ಬಸ್ಸುಗಳಿದ್ದು, ಒಂದು ದಿನದ ಪಾಸ್ ಖರೀದಿಸಿ, ಯಾವುದೇ ನಿಲುಗಡೆಯಲ್ಲಿ ಇಳಿದು ಆ ಪ್ರದೇಶವನ್ನು ವೀಕ್ಷಿಸಿ, ನಂತರ ಬರುವ ಬಸ್ಸನ್ನೇರಿ ಮುಂದಿನ ಪ್ರವಾಸಿ ತಾಣದ ನಿಲುಗಡೆಯಲ್ಲಿ ಇಳಿಯಬಹುದು. ಹೀಗೆ ಇಡೀ ದಿನ ನಗರವನ್ನು ವೀಕ್ಷಿಸಬಹುದು. ಪ್ರತೀ ನಿಲುಗಡೆಯಲ್ಲಿ ಸಾಮಾನ್ಯವಾಗಿ ಅರ್ಧ ಗಂಟೆಗೊಂದು ಬಸ್ ಬರುತ್ತದೆ. ಆದರೆ ಸ್ಪ್ಲಾಶ್ ಟೂರ್ಸ್ ಬಸ್‌ನಲ್ಲಿ ಪ್ರಯಾಣಿಸಲು ಇಚ್ಛಿಸಿದಲ್ಲಿ ಬೇರೆಯೇ ಟಿಕೆಟ್ ಖರೀದಿಸಬೇಕಾಗುತ್ತದೆ.

ರೋಟರ್ ಡ್ಯಾಂ ಪಟ್ಟಣದ ಅತ್ಯಂತ ಎತ್ತರದ ಗೋಪುರವಾದ 'ಯೂರೋಮಾಸ್ಟ್' ಬಳಿಯಿರುವ 'ಪಾರ್ಕ್ ಹೆವನ್' ಪ್ರದೇಶದಿಂದ ಪ್ರಾರಂಭವಾಗುವ ಸ್ಪ್ಲಾಶ್ ಟೂರ್ಸ್ ಬಸ್ ರೋಟರ್ ಡ್ಯಾಂನ ಪ್ರಮುಖ ಆಕರ್ಷಣೆಗಳಾದ ಮಾರ್ಕೆಟ್ ಹಾಲ್, ಕ್ಯೂಬ್ ಹೌಸ್, ರೈಲು ನಿಲ್ದಾಣ, ಎರಾಸ್ಮಸ್ ಬ್ರಿಡ್ಜ್ ಹಾಗೂ ಇನ್ನಿತರೆ ಪ್ರೇಕ್ಷಣೀಯ ಸ್ಥಳಗಳ ಹಾಗೂ ಆಧುನಿಕ ವಾಸ್ತುಶೈಲಿಯ ಕಟ್ಟಡಗಳನ್ನು ಗೈಡ್ ಪರಿಚಯಿಸುತ್ತಾ ಅಂತಿಮವಾಗಿ ಬಸ್ ಇಳಿಜಾರು ಪ್ರದೇಶದಲ್ಲಿ ಅತಿವೇಗವಾಗಿ ಮ್ಯೂಸಿ ನದಿಯನ್ನು ಪ್ರವೇಶಿಸುವಾಗ ರಭಸವಾಗಿ ನೀರನ್ನು ಚಿಮ್ಮುತ್ತಾ ಭಾಗಶಃ ಮುಳುಗಿರುವ ಬಸ್ ಹಡಗಿನಂತೆ ತೇಲುತ್ತಾ ಮುಂದೆ ಸಾಗುವ ಸಮಯದಲ್ಲಿ ಪ್ರವಾಸಿಗರು ಉತ್ಸಾಹ ಭರಿತರಾಗಿ ಕೇಕೆ ಹಾಕುತ್ತಾರೆ. 'ಸ್ಪ್ಲಾಶ್ ಟೂರ್ಸ್' ಟಿಕೆಟ್‌ಗಳನ್ನು ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯವೂ ಇದೆ.

■ ನಾಗೇಂದ್ರ ಕಾವೂರು